**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 06 ಇಎಸ್‌ಟಿ(8) 2022

**ಆಯುಕ್ತರ ಕಛೇರಿ,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001,
ದಿನಾಂಕ:20-04-2022.

## ಸುತ್ತೋಲೆ

**ವಿಷಯ:** 2022-23 ನೇ ಸಾಲಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ ಬೋಧಕ ಸಿಬ್ಬಂದಿಗಳ ಸಾರ್ವತ್ರಿಕ ವರ್ಗಾವಣೆ ಸಂಬಂಧ Service History ಯ ವಿವರಗಳನ್ನು ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿ:29-01-2021 ಮತ್ತು 29-06-2021.

***

ಉಲ್ಲೇಖದನ್ವಯ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕ ಸಿಬ್ಬಂದಿಗಳ Karnataka State Civil Services (Regulation of Transfer of Teaching Staff of Department of Technical Education) Rules 2021 ಅನ್ನು ರೂಪಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಇಲಾಖೆಯ ಅಧೀನ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಬೋಧಕ ವೃಂದದವರ 2022-23 ನೇ ಸಾಲಿನ ಬೋಧನಾ ಕಾರ್ಯಭಾರ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಸೇವಾ ವಿವರಗಳನ್ನು ದಿ:07-05-2022 ರೊಳಗೆ ಕಡ್ಡಾಯವಾಗಿ https://dtetech.karnataka.gov.in/dteone/emp/login.aspx ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿದೆ.

**ಬೋಧಕ ಸಿಬ್ಬಂದಿಗಳು ಪಾಲಿಸಬೇಕಾದ ಕ್ರಮಗಳು:-**

- ಎಲ್ಲಾ ಬೋಧಕ ಸಿಬ್ಬಂದಿಗಳು ಈಗಾಗಲೇ Create ಆಗಿರುವ Login Credential ಅನ್ನು ಬಳಸಿ ತಂತ್ರಾಂಶದಲ್ಲಿ Service history ಅನ್ನು ಅಪ್‌ಲೋಡ್/ ಅಪ್‌ಡೇಟ್ ಮಾಡುವುದು.
- ಎಲ್ಲಾ ಬೋಧಕ ಸಿಬ್ಬಂದಿ ವರ್ಗದವರು ಅವರ Service history ಅನ್ನು ಸ್ವತಃ ತಂತ್ರಾಂಶದಲ್ಲಿ Update ಮಾಡಿ, ಲಭ್ಯವಾಗುವ ಮುದ್ರಿತ ಪ್ರತಿಯನ್ನು ಸಹಿ ಮಾಡಿ ಪ್ರಾಂಶುಪಾಲರಿಗೆ ಸಲ್ಲಿಸುವುದು.
- ಬೋಧಕ ಸಿಬ್ಬಂದಿ NCC Officer/Research guide/central office bearer/ Project sanctioned by the AICTE, TEQUIP and any other Government body or any Statutory Agency ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಅನುಮೋದಿತ ಇತ್ತೀಚಿನ ದಾಖಲೆಗಳನ್ನು (2022-23 ಸಾಲಿಗೆ ಅನ್ವಯವಾಗುವಂತೆ) ಅಪ್‌ಲೋಡ್/ಅಪ್‌ಡೇಟ್ ಮಾಡುವುದು.

- ವಿಶೇಷ ಪ್ರಕರಣಗಳಾದ Serious Ailment, Physically Challenged, Widow & Spouse Case ಗಳಡಿ ವರ್ಗಾವಣೆ ಕೋರುವ ಬೋಧಕ ಸಿಬ್ಬಂದಿ ನಿಗದಿತ ನಮೂನೆಯಲ್ಲಿ ಇತ್ತೀಚಿನ Certificates/Records ಗಳನ್ನು (2022-23 ಸಾಲಿಗೆ ಅನ್ವಯವಾಗುವಂತೆ) ಅಪ್‌ಲೋಡ್/ಅಪ್‌ಡೇಟ್ ಮಾಡತಕ್ಕದ್ದು.

**ಪ್ರಾಂಶುಪಾಲರುಗಳು ಪಾಲಿಸಬೇಕಾದ ಕ್ರಮಗಳು:-**

- ಬೋಧಕ ಸಿಬ್ಬಂದಿಯ Service history ಅನ್ನು ಸಿಬ್ಬಂದಿಯ ಸೇವಾ ಪುಸ್ತಕದೊಂದಿಗೆ ತಾಳೆ ಮಾಡಿ ಪರಿಶೀಲಿಸಿ ತಂತ್ರಾಂಶದಲ್ಲಿ ಬೋಧಕರ Service history ಅನ್ನು Approve ಮಾಡಬೇಕು. Approved Copy ಗಳನ್ನು ಸಂಸ್ಥೆಯಲ್ಲಿ ಸಂರಕ್ಷಿಸುವುದು.
- ಸಂಸ್ಥೆಯು ಪ್ರಾರಂಭವಾದ ದಿನದಿಂದ ಸಂಸ್ಥೆಯ Area type of College (BBMP, BDA, City Municipal corporations, District Head Quarters, Municipal corporations & Other area) ಅನ್ನು ಕಡ್ಡಾಯವಾಗಿ Update ಮಾಡುವುದು.
- 2022-23 ನೇ ಸಾಲಿಗೆ ಸಂಬಂಧಿಸಿದಂತೆ, ಸಂಸ್ಥೆಗಳಲ್ಲಿರುವ ಎಲ್ಲಾ ಕೋರ್ಸುಗಳಿಗೆ ಸಂಬಂಧಿಸಿದ ವಿಷಯಗಳ ಬೋಧನಾ ಕಾರ್ಯಭಾರವನ್ನು ಕಡ್ಡಾಯವಾಗಿ Update ಮಾಡುವುದು.
- ವರ್ಗಾವಣೆ ಸಂಬಂಧ ಬೋಧಕ ಸಿಬ್ಬಂದಿಗಳು ಮಾಹಿತಿ/ದಾಖಲೆಗಳನ್ನು ನಿಗದಿತ ದಿನಾಂಕದೊಳಗೆ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಕ್ರಮ ವಹಿಸುವುದು.

ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾದ Service history ಮಾಹಿತಿಯಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಬೋಧಕ ಸಿಬ್ಬಂದಿ ಮತ್ತು ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

ಟಿಪ್ಪಣಿ ಮಾನ್ಯ ಆಯುಕ್ತರಿಂದ
ಅನುಮೋದಿಸಿದೆ.

**ಜಂಟಿ ನಿರ್ದೇಶಕರು (ಆಡಳಿತ)**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಆಯುಕ್ತರ ಅಪ್ತಶಾಖೆಗೆ ಮಾಹಿತಿಗಾಗಿ.
3. ನಿರ್ದೇಶಕರ ಅಪ್ತಶಾಖೆಗೆ ಮಾಹಿತಿಗಾಗಿ
4. ಆಯುಕ್ತಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.